## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯದ 189 ಗ್ರಾಮೀಣ ಮತಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/ 18 /ಗ್ರಾನೀಸ (4) 2013, ದಿ:16.02.2013.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ/ 35 /ಗ್ರಾನೀಸ (4) 2015, ದಿ:07.03.2015.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/ 35 /ಗ್ರಾನೀಸ (4) 2015, ದಿ:13.03.2015

---

**ಪೀಠಿಕೆ:**

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮಳೆಯ ವೈಫಲ್ಯದಿಂದ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿತ ಕಂಡಿದ್ದು, ಇದರಿಂದಾಗಿ ಅಂತರ್ಜಲ ಆಧಾರಿತ ಕುಡಿಯುವ ನೀರು ಸರಬರಾಜು ಯೋಜನೆಗಳು ವಿಫಲಗೊಳ್ಳುತ್ತಿದ್ದು, ತೀವ್ರ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿರುವ ಹಿನ್ನೆಲೆಯಲ್ಲಿ ತುರ್ತು ಕುಡಿಯುವ ನೀರು ಪೂರೈಕೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು **ಮೇಲೆ ಓದಲಾದ (3)ರ ಆದೇಶದಲ್ಲಿ ಹೆಚ್ಚುವರಿ / ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಸದರಿ ಆದೇಶ ಹಿಂಪಡೆದು ದಿ:25.03.2015ರಲ್ಲಿ FD ಪ್ರತ್ಯೇಕವಾಗಿ ಸಹಮತಿಸಿದಂತೆ ರೂ.67.74ಕೋಟಿಗೆ ಸೀಮಿತಗೊಳಿಸಿ ಆದೇಶ ಹೊರಡಿಸಿದೆ. ಹಿಂದಿನ ಆದೇಶ ದಿ:13.03.2015ರಲ್ಲಿನ ಅನುದಾನ ಬಿಡುಗಡೆ ಮೊತ್ತ ಸರಿದೂಗಿಸಲು ಮತ್ತು** ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗದಂತೆ **189** ಗ್ರಾಮೀಣ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಅನುಷ್ಠಾನಗೊಳಿಸಲು ಆರ್ಥಿಕ ಇಲಾಖೆ **SE-I ಮತ್ತು SE-IIರಲ್ಲಿ ಒದಗಿಸಲಾಗಿದ್ದ ರೂ.200.00ಕೋಟಿ ಅನುದಾನದ ಪೈಕಿ ರಾಜ್ಯ ಮಟ್ಟದಲ್ಲಿ ಬಾಕಿ ಉಳಿದಿರುವ** ಅನುದಾನ **ರೂ.18.15ಕೋಟಿಗಳನ್ನು** ಬಿಡುಗಡೆ ಮಾಡಲು ನಿರ್ಧರಿಸಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 35 ಗ್ರಾನೀಸ(4) 2015 ಬೆಂಗಳೂರು, ದಿನಾಂಕ:25.03.2015**

ಪೀಠಿಕೆಯಲ್ಲಿನ ವಾಸ್ತವಾಂಶಗಳನ್ನು ಪರಿಶೀಲಿಸಿ, **ದಿ:13.03.2015ರ** ಆದೇಶ ಹಿಂಪಡೆದ ಕಾರಣ, ಸದರಿ ಅನುದಾನ ಬಿಡುಗಡೆಗೆ ಪೂರಕವಾಗಿ **ದಿ:25.03.2015ರಲ್ಲಿ** ಹೊರಡಿಸಿದ ವಿಶೇಷ ಅನುದಾನ ಬಿಡುಗಡೆ ಆದೇಶಕ್ಕೆ ಸಂಬಂಧಿಸಿದಂತೆ ಪೂರಕವಾಗಿ, ಪ್ರಸ್ತುತ, ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗದಂತೆ ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿನ ಟಾಸ್ಕ್‌ಫೋರ್ಸ್ ಸಮಿತಿ ಗುರುತಿಸುವ **ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು** ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಅನುಷ್ಠಾನಗೊಳಿಸಲು, ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧ-1ರಲ್ಲಿರುವಂತೆ** ರಾಜ್ಯದ **189** ಗ್ರಾಮೀಣ ಮತಕ್ಷೇತ್ರಗಳಿಗೆ **ರೂ.18.15ಕೋಟಿ(ಹದಿನೆಂಟು ಕೋಟಿ ಹದಿನೈದು ಲಕ್ಷ ರೂಪಾಯಿಗಳು ಮಾತ್ರ)**ಗಳ ವಿಶೇಷ / ಹೆಚ್ಚುವರಿ ಅನುದಾನವನ್ನು **2014-15ನೇ** ಸಾಲಿನ ರಾಜ್ಯವಲಯದ **ಕವರೇಜ್ ಅಂಡ್ ಕ್ವಾಲಿಟಿ (C&Q)** ಘಟಕದಡಿ ರಾಜ್ಯದ ಎಲ್ಲಾ **30** ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

4. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವು ಕೆಳಕಂಡ ನಿಬಂಧನೆಗೊಳಪಟ್ಟಿರುತ್ತದೆ:

I. ಮೇಲೆ ಓದಲಾದ ಸರ್ಕಾರದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ವಯ ಅನುಮೋದಿಸಲ್ಪಟ್ಟ ಕಾಮಗಾರಿಗಳನ್ನು ಮಾತ್ರ ಅನುಷ್ಠಾನಗೊಳಿಸಬೇಕು.

II. ಎಲ್ಲಿ ನೈಜವಾಗಿ ಕುಡಿಯುವ ನೀರಿನ ಸಮಸ್ಯೆಯಿದೆಯೋ ಅಂತಹ ಕಡೆಗಳಲ್ಲಿ ಮಾತ್ರ ಅಗತ್ಯ ಪುನಃಶ್ಚೇತನ (ಅಂದರೆ – ಕೊಳವೆ ಬಾವಿಗಳನ್ನು ಕೊರೆಯಿಸುವುದು, ಸ್ವಚ್ಛಗೊಳಿಸುವುದು, ಹೈಡ್ರೋಫ್ರಾಕ್ಚರಿಂಗ್‌ಗೊಳಿಸುವುದು, ಪಂಪ್ ಮೋಟಾರ್ ಅಳವಡಿಸುವುದು, ಪೈಪ್‌ಲೈನ್ ವಿಸ್ತರಣೆ)ದಂತಹ ಸಣ್ಣ ಪ್ರಮಾಣದ ಕಾಮಗಾರಿಗಳನ್ನು ಮಾತ್ರ ಅನುಷ್ಠಾನಗೊಳಿಸತಕ್ಕದ್ದು, ಹಾಗೂ ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆಯುವಂತಹ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

III. ತೀವ್ರ ಅನಿವಾರ್ಯವಿದ್ದಲ್ಲಿ ಮಾತ್ರ ಭೂ ವಿಜ್ಞಾನಿಗಳ ಸಲಹೆ ಮೇರೆಗೆ **ಹೊಸ ಬೋರ್‌ವೆಲ್‌ಗಳನ್ನು ಕೊರೆಸಿ,** ಸದರಿ ಬೋರ್‌ವೆಲ್‌ಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುವಂತೆ ನೋಡಿಕೊಳ್ಳತಕ್ಕದ್ದು.

IV. ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಮುನ್ನ ಅದರ ಸ್ಥಳ ಮತ್ತು ಗುರುತಿಗಾಗಿ **GPS System** ಮುಖೇನ ಅಧಿಕೃತ ದಾಖಲೆ ಮಾಡುವುದರ ಜೊತೆಗೆ, ಅದರ ಛಾಯಾ ಚಿತ್ರವನ್ನು ಕಾಮಗಾರಿಗೆ ಮುನ್ನ ಹಾಗೂ ನಂತರ ತೆಗೆದು ಗಾಂಧಿ ಸಾಕ್ಷಿ ಕಾಯಕದಲ್ಲಿ ದಾಖಲಿಸತಕ್ಕದ್ದು. ಸಂಬಂಧಪಟ್ಟ ಸ್ಥಳೀಯ ಹಿರಿಯ ಅಧಿಕಾರಿ ಈ ಪ್ರಕ್ರಿಯೆಯನ್ನು ಧೃಡೀಕರಿಸತಕ್ಕದ್ದು.

V. ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧದಲ್ಲಿನ** ಅನುದಾನವನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್ ಫೋರ್ಸ್ ಸಮಿತಿಗಳ ಶಿಫಾರಸ್ಸಿನನ್ವಯ ವಿನಿಯೋಗಿಸತಕ್ಕದ್ದು ಹಾಗೂ ಹೊಸ ಬೋರ್‌ವೆಲ್ ಮತ್ತು ತುರ್ತು ಪುನಃಶ್ಚೇತನ ಕಾಮಗಾರಿಗಳಿಗೆ ವಿನಿಯೋಗಿಸತಕ್ಕದ್ದು.

...2

VI. ಕ್ರಿಯಾ ಯೋಜನೆಯನ್ನು ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸತಕ್ಕದ್ದು. ಈಗ ಒದಗಿಸಿರುವ ಅನುದಾನದ ಮಿತಿಯೊಳಗೆ ತುರ್ತು ಕಾಮಗಾರಿಗಳನ್ನು ಸ್ಥಳೀಯ ಅಗತ್ಯತೆ ಆಧರಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ** (RDWSD) ಮುಖೇನ ಅನುಷ್ಠಾನಗೊಳಿಸಬೇಕು.

4. ಅನುಷ್ಠಾನಗೊಳಿಸಿರುವ ಕಾಮಗಾರಿಗಳ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಮಾಹಿತಿಗಾಗಿ ಕಳುಹಿಸುವುದು. **ಜಿಲ್ಲಾ ಪಂಚಾಯತ್ ಇತರೆ ಯಾವುದೇ ಕಾರಣಕ್ಕೂ ಈ ಆದೇಶದಲ್ಲಿ ಹೇಳಲಾದ ಕಾಮಗಾರಿಗಳು ಇತರೆ ಗ್ರಾಮೀಣ ನೀರು ಸರಬರಾಜು ಯೋಜನೆಗಳಡಿ ಪುನರಾವರ್ತನೆಯಾಗದಂತೆ ನೋಡಿಕೊಳ್ಳತಕ್ಕದ್ದು.** ಕಾಮಗಾರಿಗಳ ಅನುಷ್ಠಾನಕ್ಕೆ ಮುನ್ನ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದುಕೊಳ್ಳತಕ್ಕದ್ದು.

5. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಆಯುಕ್ತರು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (RDWSD)**ರವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆಯಿಂದ ಡ್ರಾ ಮಾಡಿ ಕೇಂದ್ರ ಸರ್ಕಾರಕ್ಕೆ ಘೋಷಿಸಿರುವ ಸಿಂಡಿಕೇಟ್ ಬ್ಯಾಂಕ್‌ನ **SB ಖಾತೆ ಸಂಖ್ಯೆ: 04462010091577**ಗೆ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ **(NRDWP)**ಯಡಿ ರಾಜ್ಯದ ಪಾಲಾಗಿ ಜಮೆ ಮಾಡಬೇಕು.

6. ಈ ಆದೇಶದಲ್ಲಿ ಬಿಡುಗಡೆಯಾದ ರಾಜ್ಯವಲಯದ ಅನುದಾನವನ್ನು **ಲೆಕ್ಕಶೀರ್ಷಿಕೆ:4215-01-102-9-01-059**ರಡಿ ಗಣನೆಗೆ ತೆಗೆದುಕೊಂಡು, **RTGS** ಮುಖೇನ ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ **(SWSM)** ಬ್ಯಾಂಕ್ ಖಾತೆ ಮುಖೇನ ವಿನಿಯೋಗಿಸತಕ್ಕದ್ದು. **ಸಿಂಡಿಕೇಟ್ ಬ್ಯಾಂಕ್ ಮೂಲ ಖಾತೆ ಸಂಖ್ಯೆ: 04462010091577** ಮುಖೇನ ಜಿಲ್ಲಾ ಪಂಚಾಯತ್‌ಗಳು ಕಳುಹಿಸುವ ಬಿಲ್‌ಗಳನ್ನು ಮಾನ್ಯ ಮಾಡತಕ್ಕದ್ದು. ಸದರಿ **ರೂ.18.15ಕೋಟಿ** ಅನುದಾನ ವಿನಿಯೋಗದ ಆರ್ಥಿಕ ಮತ್ತು ಭೌತಿಕ ಪ್ರಗತಿಗಳನ್ನು ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ **(CE/RDWSD)** ಹಾಗೂ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳು **IMIS**ನಡಿ ಹಾಗೂ **ಗಾಂಧಿ ಸಾಕ್ಷಿ ಕಾಯಕದಲ್ಲಿ** ದಾಖಲಿಸತಕ್ಕದ್ದು.

7. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 117 ಗ್ರಾನೀಸ(4) 2011 ದಿ:15.10.2011ರನ್ವಯ ಅಧೀಕ್ಷಕ ಅಭಿಯಂತರರು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ** (RDWSD) ವೃತ್ತ ಕಛೇರಿ ಇವರುಗಳು ಈ ಆದೇಶದಡಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪರಿವೀಕ್ಷಣೆ ಮಾಡಿ, ಸರ್ಕಾರಕ್ಕೆ ವಾಸ್ತವಿಕ ಚಿತ್ರಣ ನೀಡತಕ್ಕದ್ದು.

**8.** ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು, ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ **ಆದೇಶ ಸಂಖ್ಯೆ: ಗ್ರಾಅಪ/153/ಎಫ್‌ಎನ್/2014, ದಿನಾಂಕ:01.04.2014ರನ್ವಯ** ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಇಮೇಲ್:rk3452000@gmail.com
ಫೋನ್:22240508, ಫ್ಯಾಕ್ಸ್:22233175

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.

...3

7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ / ವಿಕಾಸಸೌಧ ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,
9. ಬೆಂಗಳೂರು. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು-09
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂಗಳೂರು-09.
12. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು.
13. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
14. ರಾಜ್ಯದ ಎಲ್ಲಾ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು.
15. ಎಲ್ಲಾ (38) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಎಲ್ಲಾ 176 ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
18. ಆಯುಕ್ತರು, RDWSD ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು / ಇವರುಗಳ ಆಪ್ತ ಸಹಾಯಕರು.
19. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
20. ಉಪ ನಿರ್ದೇಸಕರು, Network Management Center (TNMC), ನಂ.49, ಖನಿಜ ಭವನ, ರೇಸ್ ಕೋರ್ಸ ರಸ್ತೆ, ಬೆಂಗಳೂರು.
21. ಎಲ್ಲಾ (30) ಜಿಲ್ಲಾ ಖಜಾನಾಧಿಕಾರಿಗಳು.
22. **ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದ್ಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.**
23. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
24. ರಾಜ್ಯದ ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ, ಮತ್ತು ಗ್ರಾ.ಕು.ನೀ ಮತ್ತು ನೈರ್ಮಲ್ಯ ಉಪ ವಿಭಾಗಗಳು.
25. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
26. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
27. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
28. ಶಾಖಾ ರಕ್ಷಾ ಕಡತಃ ಹೆಚ್ಚುವರಿ ಪ್ರತಿಗಳು.

**ಅನುಬಂಧ - 1**

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 35 ಗ್ರಾನೀಸ(4)2015, ಬೆಂಗಳೂರು, ದಿನಾಂಕ: 25.03.2015ರ ಲಗತ್ತು**

| ಕ್ರ. ಸಂ | ಜಿಲ್ಲೆ | ಗ್ರಾಮೀಣ ಮತಕ್ಷೇತ್ರ | | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಬಾಗಲಕೋಟೆ | 1 | ಬೀಳಗಿ | 9.51 |
| | | 2 | ಜಮಖಂಡಿ | 9.51 |
| | | 3 | ಮುಧೋಳ | 9.51 |
| | | 4 | ಬಾದಾಮಿ | 9.51 |
| | | 5 | ಹುನಗುಂದ | 9.51 |
| | | 6 | ತೆರೆದಾಳ್ | 9.51 |
| | | 7 | ಬಾಗಲಕೋಟೆ | 9.51 |
| | | | ಒಟ್ಟು | **66.57** |
| 2 | ಬೆಂಗಳೂರು (ಗ್ರಾ) | 8 | ದೇವನಹಳ್ಳಿ | 10.57 |
| | | 9 | ದೊಡ್ಡಬಳ್ಳಾಪುರ | 9.51 |
| | | 10 | ಹೊಸಕೋಟೆ | 10.57 |
| | | 11 | ನೆಲಮಂಗಲ | 9.51 |
| | | | ಒಟ್ಟು | **40.16** |
| 3 | ಬೆಂಗಳೂರು (ನ) | 12 | ಆನೇಕಲ್ | 10.57 |
| | | 13 | ಬ್ಯಾಟರಾಯನಪುರ | 10.57 |
| | | 14 | ಬೆಂಗಳೂರು (ದಕ್ಷಿಣ) | 10.57 |
| | | 15 | ಮಹದೇವಪುರ | 10.57 |
| | | 16 | ಯಲಹಂಕ | 10.57 |
| | | 17 | ಯಶವಂತಪುರ | 10.57 |
| | | | ಒಟ್ಟು | **63.42** |
| 4 | ಬೆಳಗಾವಿ | 18 | ಅಥಣಿ | 9.51 |
| | | 19 | ಸೌವದತ್ತಿ | 9.51 |
| | | 20 | ಚಿಕ್ಕೋಡಿ | 9.51 |
| | | 21 | ರಾಮದುರ್ಗ | 9.51 |
| | | 22 | ಬೈಲಹೊಂಗಲ | 9.51 |
| | | 23 | ಹುಕ್ಕೇರಿ | 9.51 |
| | | 24 | ರಾಯಭಾಗ | 9.51 |
| | | 25 | ಗೋಕಾಕ್ | 9.51 |
| | | 26 | ಖಾನಾಪುರ | 9.51 |
| | | 27 | ಬೆಳಗಾವಿ | 9.51 |
| | | 28 | ಬೆಳಗಾವಿ (ದಕ್ಷಿಣ) | 9.51 |
| | | 29 | ಯಮಕನ್‌ಮರಡಿ | 9.51 |
| | | 30 | ಕಾಗವಾಡ್ | 9.51 |
| | | 31 | ಕುಡಚಿ | 9.51 |
| | | 32 | ನಿಪ್ಪಾಣಿ | 9.51 |
| | | 33 | ಬೈಲಹೊಂಗಲ –ಕಿತ್ತೂರ್ | 9.51 |
| | | 34 | ಗೋಕಾಕ್ – ಅರೆಭಾವಿ | 9.51 |
| | | | ಒಟ್ಟು | **161.67** |
| 5 | ಬಳ್ಳಾರಿ | 35 | ಬಳ್ಳಾರಿ | 9.51 |
| | | 36 | ಕಂಪ್ಲಿ | 9.51 |
| | | 37 | ವಿಜಯನಗರ | 9.51 |
| | | 38 | ಹಗರಿಬೊಮ್ಮನಹಳ್ಳಿ | 9.51 |
| | | 39 | ಕೂಡ್ಲಗಿ | 9.51 |
| | | 40 | ಸಂಡೂರು | 9.51 |
| | | 41 | ಸಿರಗುಪ್ಪ | 9.51 |
| | | 42 | ಹಡಗಲಿ | 9.51 |
| | | | ಒಟ್ಟು | **76.08** |
| 6 | ಬೀದರ್ | 43 | ಬೀದರ್ (ಉತ್ತರ) | 10.57 |
| | | 44 | ಬೀದರ್ (ದಕ್ಷಿಣ) | 10.57 |
| | | 45 | ಔರಾದ್ | 10.57 |
| | | 46 | ಭಾಲ್ಕಿ | 10.57 |
| | | 47 | ಬಸವಕಲ್ಯಾಣ | 10.57 |
| | | 48 | ಹುಮ್ನಾಬಾದ್ | 10.57 |
| | | | ಒಟ್ಟು | **63.42** |

| | | | | |
|---|---|---|---|---|
| 7 | ಬಿಜಾಪುರ | 49 | ಬಬ್ಲೇಶ್ವರ | 9.51 |
| | | 50 | ನಾಗಠಾಣ | 9.51 |
| | | 51 | ದೇವರ ಹಿಪ್ಪರಗಿ | 9.51 |
| | | 52 | ಬಸವನಬಾಗೇವಾಡಿ | 9.51 |
| | | 53 | ಬಿಜಾಪುರ | 9.51 |
| | | 54 | ಇಂಡಿ | 9.51 |
| | | 55 | ಸಿಂಧಗಿ | 9.51 |
| | | 56 | ಮುದ್ದೆಬಿಹಾಳ | 9.51 |
| | | | ಒಟ್ಟು | **76.08** |
| 8 | ಚಾಮರಾಜನಗರ | 57 | ಚಾಮರಾಜನಗರ | 9.51 |
| | | 58 | ಗುಂಡ್ಲುಪೇಟೆ | 9.51 |
| | | 59 | ಕೊಳ್ಳೆಗಾಲ | 9.51 |
| | | 60 | ಹನೂರು | 9.51 |
| | | | ಒಟ್ಟು | **38.04** |
| 9 | ಚಿಕ್ಕಬಳ್ಳಾಪುರ | 61 | ಚಿಕ್ಕಬಳ್ಳಾಪುರ | 10.57 |
| | | 62 | ಚಿಂತಾಮಣಿ | 10.57 |
| | | 63 | ಗೌರಿಬಿದನೂರು | 10.57 |
| | | 64 | ಬಾಗೇಪಲ್ಲಿ | 10.57 |
| | | 65 | ಶಿಡ್ಲಘಟ್ಟ | 10.57 |
| | | | ಒಟ್ಟು | **52.85** |
| 10 | ಚಿಕ್ಕಮಗಳೂರು | 66 | ಕಡೂರು | 8.45 |
| | | 67 | ತರೀಕೆರೆ | 8.45 |
| | | 68 | ಚಿಕ್ಕಮಗಳೂರು | 8.45 |
| | | 69 | ಶೃಂಗೇರಿ | 8.45 |
| | | 70 | ಮೂಡಿಗೆರೆ | 8.45 |
| | | | ಒಟ್ಟು | **42.25** |
| 11 | ಚಿತ್ರದುರ್ಗ | 71 | ಚಳ್ಳಕೆರೆ | 9.51 |
| | | 72 | ಚಿತ್ರದುರ್ಗ | 9.51 |
| | | 73 | ಹೊಸದುರ್ಗ | 9.51 |
| | | 74 | ಮೊಳಕಾಲ್ಮೂರು | 9.51 |
| | | 75 | ಹಿರಿಯೂರು | 9.51 |
| | | 76 | ಹೊಳಲ್ಕೆರೆ | 9.51 |
| | | | ಒಟ್ಟು | **57.06** |
| 12 | ದಕ್ಷಿಣ ಕನ್ನಡ | 77 | ಬಂಟ್ವಾಳ | 8.45 |
| | | 78 | ಬೆಳ್ತಂಗಡಿ | 8.45 |
| | | 79 | ಮಂಗಳೂರು (ಉತ್ತರ) | 8.45 |
| | | 80 | ಮಂಗಳೂರು (ದಕ್ಷಿಣ) | 8.45 |
| | | 81 | ಮೂಡಬಿದಿರೆ | 8.45 |
| | | 82 | ಪುತ್ತೂರು | 8.45 |
| | | 83 | ಸುಳ್ಯ | 8.45 |
| | | | ಒಟ್ಟು | **59.15** |
| 13 | ದಾವಣಗೆರೆ | 84 | ಜಗಳೂರು | 9.51 |
| | | 85 | ಮಾಯಕೊಂಡ | 9.51 |
| | | 86 | ಹರಪನಹಳ್ಳಿ | 9.51 |
| | | 87 | ದಾವಣಗೆರೆ (ದಕ್ಷಿಣ) | 9.51 |
| | | 88 | ದಾವಣಗೆರೆ (ಉತ್ತರ) | 9.51 |
| | | 89 | ಹೊನ್ನಾಳಿ | 9.51 |
| | | 90 | ಚನ್ನಗಿರಿ | 9.51 |
| | | 91 | ಹರಿಹರ | 9.51 |
| | | | ಒಟ್ಟು | **76.08** |
| 14 | ಧಾರವಾಡ | 92 | ನವಲಗುಂದ | 9.93 |
| | | 93 | ಕುಂದಗೋಳ | 9.93 |
| | | 94 | ಕಲಘಟಗಿ | 9.93 |
| | | 95 | ಧಾರವಾಡ | 9.93 |
| | | | ಒಟ್ಟು | **39.72** |
| 15 | ಗದಗ | 96 | ಗದಗ | 9.51 |
| | | 97 | ರೋಣ | 9.51 |
| | | 98 | ಶಿರಹಟ್ಟಿ | 9.51 |
| | | 99 | ನರಗುಂದ | 9.51 |
| | | | ಒಟ್ಟು | **38.04** |

| | | | | |
|---|---|---|---|---|
| 16 | ಗುಲ್ಬರ್ಗಾ | 100 | ಅಫಜಲ್‌ಪುರ | 9.51 |
| | | 101 | ಆಳಂದ | 10.57 |
| | | 102 | ಚಿಂಚೋಳಿ | 10.57 |
| | | 103 | ಚಿತ್ತಾಪುರ | 9.51 |
| | | 104 | ಗುಲ್ಬರ್ಗಾ (ದಕ್ಷಿಣ) | 9.51 |
| | | 105 | ಗುಲ್ಬರ್ಗಾ (ಗ್ರಾಮಾಂತರ) | 9.50 |
| | | 106 | ಜೇವರ್ಗಿ | 10.57 |
| | | 107 | ಸೇಡಂ | 9.51 |
| | | | ಒಟ್ಟು | **79.25** |
| 17 | ಹಾಸನ | 108 | ಅರಸೀಕೆರೆ | 10.57 |
| | | 109 | ಹಾಸನ | 9.51 |
| | | 110 | ಶ್ರವಣಬೆಳಗೊಳ | 9.51 |
| | | 111 | ಹೊಳೆನರಸೀಪುರ | 9.51 |
| | | 112 | ಅರಕಲಗೂಡು | 9.51 |
| | | 113 | ಬೇಲೂರು | 10.57 |
| | | 114 | ಸಕಲೇಶಪುರ | 9.51 |
| | | | ಒಟ್ಟು | **68.69** |
| 18 | ಹಾವೇರಿ | 115 | ರಾಣೆಬೆನ್ನೂರು | 9.51 |
| | | 116 | ಶಿಗ್ಗಾವಿ & ಸವಣೂರು ಡಿವಿಷನ್ | 9.51 |
| | | 117 | ಹಾವೇರಿ & ಸವಣೂರು ಡಿವಿಷನ್ | 9.51 |
| | | 118 | ಹಿರೇಕೆರೂರು | 9.51 |
| | | 119 | ಬ್ಯಾಡಗಿ | 9.51 |
| | | 120 | ಹಾನಗಲ್ | 9.51 |
| | | | ಒಟ್ಟು | **57.06** |
| 19 | ಕೊಡಗು | 121 | ಮಡಿಕೇರಿ | 8.45 |
| | | 122 | ವಿರಾಜಪೇಟೆ | 8.45 |
| | | | ಒಟ್ಟು | **16.90** |
| 20 | ಕೋಲಾರ | 123 | ಬಂಗಾರಪೇಟೆ | 10.57 |
| | | 124 | ಕೆ.ಜಿ.ಎಫ್ | 9.51 |
| | | 125 | ಕೋಲಾರ | 10.57 |
| | | 126 | ಶ್ರೀನಿವಾಸಪುರ | 10.57 |
| | | 127 | ಮುಳಬಾಗಿಲು | 10.57 |
| | | 128 | ಮಾಲೂರು | 10.57 |
| | | | ಒಟ್ಟು | **62.36** |
| 21 | ಕೊಪ್ಪಳ | 129 | ಗಂಗಾವತಿ | 9.51 |
| | | 130 | ಕನಕಗಿರಿ | 9.51 |
| | | 131 | ಕೊಪ್ಪಳ | 9.51 |
| | | 132 | ಕುಷ್ಟಗಿ | 9.51 |
| | | 133 | ಯಲಬುರ್ಗ | 9.51 |
| | | | ಒಟ್ಟು | **47.55** |
| 22 | ಮಂಡ್ಯ | 134 | ಕೆ.ಆರ್.ಪೇಟೆ | 9.51 |
| | | 135 | ಮದ್ದೂರು | 9.51 |
| | | 136 | ಮಳವಳ್ಳಿ | 9.51 |
| | | 137 | ಮಂಡ್ಯ | 9.51 |
| | | 138 | ನಾಗಮಂಗಲ | 9.51 |
| | | 139 | ಮೇಲುಕೋಟೆ | 9.51 |
| | | 140 | ಶ್ರೀರಂಗಪಟ್ಟಣ | 9.51 |
| | | | ಒಟ್ಟು | **66.57** |
| 23 | ಮೈಸೂರು | 141 | ಕೃಷ್ಣಾರಾಜನಗರ | 9.93 |
| | | 142 | ವರುಣ | 9.93 |
| | | 143 | ನಂಜನಗೂಡು | 9.93 |
| | | 144 | ಟಿ.ನರಸೀಪುರ | 9.93 |
| | | 145 | ಚಾಮುಂಡೇಶ್ವರಿ | 9.93 |
| | | 146 | ಪಿರಿಯಾಪಟ್ಟಣ | 9.93 |
| | | 147 | ಹುಣಸೂರು | 9.93 |
| | | 148 | ಹೆಗ್ಗಡದೇವನಕೋಟೆ | 9.93 |
| | | | ಒಟ್ಟು | **79.44** |

| | | | | |
|---|---|---|---|---|
| 24 | ರಾಯಚೂರು | 149 | ದೇವದುರ್ಗ | 9.50 |
| | | 150 | ಮಸ್ಕಿ | 9.50 |
| | | 151 | ಲಿಂಗಸುಗೂರು | 9.50 |
| | | 152 | ಮಾನ್ವಿ | 9.50 |
| | | 153 | ರಾಯಚೂರು | 9.50 |
| | | 154 | ಸಿಂಧನೂರು | 9.50 |
| | | | ಒಟ್ಟು | **57.00** |
| 25 | ರಾಮನಗರ | 155 | ಚನ್ನಪಟ್ಟಣ | 10.57 |
| | | 156 | ಕನಕಪುರ | 10.57 |
| | | 157 | ಮಾಗಡಿ | 9.51 |
| | | 158 | ರಾಮನಗರ | 10.57 |
| | | | ಒಟ್ಟು | **41.22** |
| 26 | ಶಿವಮೊಗ್ಗ | 159 | ಭದ್ರಾವತಿ | 8.45 |
| | | 160 | ಶಿವಮೊಗ್ಗ | 8.45 |
| | | 161 | ಶಿಕಾರಿಪುರ | 8.45 |
| | | 162 | ಸೊರಬ | 8.45 |
| | | 163 | ತೀರ್ಥಹಳ್ಳಿ | 8.45 |
| | | 164 | ಸಾಗರ | 8.45 |
| | | | ಒಟ್ಟು | **50.70** |
| 27 | ತುಮಕೂರು | 165 | ಕುಣಿಗಲ್ | 10.57 |
| | | 166 | ಮಧುಗಿರಿ | 10.57 |
| | | 167 | ಪಾವಗಡ | 10.57 |
| | | 168 | ಶಿರಾ | 10.57 |
| | | 169 | ತುಮಕೂರು | 9.51 |
| | | 170 | ಚಿಕ್ಕನಾಯಕನಹಳ್ಳಿ | 9.51 |
| | | 171 | ಗುಬ್ಬಿ | 9.51 |
| | | 172 | ತಿಪಟೂರು | 9.51 |
| | | 173 | ಕೊರಟಗೆರೆ | 10.57 |
| | | 174 | ತುರುವೇಕೆರೆ | 9.51 |
| | | | ಒಟ್ಟು | **100.40** |
| 28 | ಉತ್ತರ ಕನ್ನಡ | 175 | ಶಿರಸಿ | 9.50 |
| | | 176 | ಹಳಿಯಾಳ | 9.50 |
| | | 177 | ಬಟ್ಕಳ | 9.50 |
| | | 178 | ಕಾರವಾರ | 9.50 |
| | | 179 | ಕುಮುಟ | 9.50 |
| | | 180 | ಯಲ್ಲಾಪುರ | 9.50 |
| | | | ಒಟ್ಟು | **57.00** |
| 29 | ಉಡುಪಿ | 181 | ಉಡುಪಿ | 8.45 |
| | | 182 | ಬೈಂದೂರು | 8.45 |
| | | 183 | ಕುಂದಾಪುರ | 8.45 |
| | | 184 | ಕೊಪ್ಪ | 8.45 |
| | | 185 | ಕಾರ್ಕಳ | 8.45 |
| | | | ಒಟ್ಟು | **42.25** |
| 30 | ಯಾದಗಿರಿ | 186 | ಶಹಾಪುರ | 9.50 |
| | | 187 | ಶೋರಾಪುರ | 9.50 |
| | | 188 | ಗುರುಮಿಟ್ಕಲ್ | 9.50 |
| | | 189 | ಯಾದಗಿರಿ | 9.50 |
| | | | ಒಟ್ಟು | **38.00** |
| | | | ಒಟ್ಟು ಮೊತ್ತ | **1815.00** |

400

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ